## ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ.ನಂಃ 446/2014**

ಚಾಸಾ ಃ 1

| | | |
|---|---|---|
| ಹೆಸರು | : | ಮಹೇಬೂಬ್ |
| ತಂದೆಯ ಹೆಸರು | : | ಚಾಂದ್‌ಪಾಷಾ ಚೌಧರಿ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಪೋಲೀಸ್ ಪೇದೆ, ರಟಕಲ್ ಪೋಲೀಸ್ ಠಾಣೆ |
| ವಾಸಸ್ಥಳ | : | ರಟಕಲ್ |
| ದಿನಾಂಕಃ | ಃ | 28-11-2019 ಸತ್ಯಪ್ರತಿಜ್ಞೆ ಮೇರೆಗೆ |

**ಮುಖ್ಯ ವಿಚಾರಣೆಃ- ಎ.ಪಿ.ಪಿ ಅವರಿಂದ ಃ-**

ಸುಮಾರು 5 ವರ್ಷಗಳಿಂದ ರಟಕಲ್ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆ ಅಂತ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 19-04-2019 ರಂದು ಪ್ರಕರಣದಲ್ಲಿನ ಆರೋಪಿತನಾದ ಅನೀಶ್ ಅಲಿ ರವರ ವಿರುದ್ಧ ಉದ್ಘೋಷಣೆ ಜಾರಿ ಮಾಡುವ ಸಲುವಾಗಿ ನೀಡಿರುತ್ತಾರೆ. ದಿನಾಂಕ 20-04-2019 ರಂದು ಬೆ.10ಃ30 ಗಂಟೆ ಸುಮಾರಿಗೆ ಸಂತ್ರಾಸ್‌ವಾಡಿಯ ಬಳಿ ಹೋಗಿ ಲಿಯಾಖತ್ ತಂದೆ ಮಷಾಕ್‌ಸಾಬ್ ಮತ್ತು ಫೈಜಲ್ ಅಹ್ಮದ್ ತಂದೆ ಮಹೇಮೂದ್‌ಮಿಯಾ ರವರನ್ನು ಆರೋಪಿತರ ಬಗ್ಗೆ ವಿಚಾರಿಸಲಾಗಿ ಅವರು ನಾವು ತಿಳಿಸಿದ ವ್ಯಕ್ತಿಗಳು ಯಾರೂ ಇಲ್ಲ ಎಂದು ತಿಳಿಸಿರುತ್ತಾರೆ. ಅದರಂತೆ ನಾನು ಉದ್ಘೋಷಣೆ ಪತ್ರವನ್ನು ಜಮೀಲ್ ಟೀ-ಪಾಯಿಂಟ್, ಹಳೆಯ ಎಂಪ್ಲಾಯಿಮೆಂಟ್ ಆಫೀಸ್, ಬಸವೇಶ್ವರ ಕಾಲೋನಿಯ ಮುಖ್ಯ ರಸ್ತೆ, ಕಿರಾಣಿ ಅಂಗಡಿ, ಮತ್ತು ಸೌಥ್ ಗುಂಬಸ್ ಹತ್ತಿರ ಹಾಗೂ ನ್ಯಾಯಾಲಯದ ನೋಟಿಸ್ ಬೋರ್ಡ್‌ಗೆ ಅಂಟಿಸಿ ಪಂಚನಾಮೆ ತಯಾರಿಸಿರುತ್ತೇನೆ. ಸಾಕ್ಷಿ ತಾವು ತಯಾರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಸಿ-1 ಎಂದು ಗುರುತಿಸಲಾಯಿತು.

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ